ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 18-10-1971.

*<u>ದೀಪಾವಳಿ - ಚೈತನ್ಯ ದೀಪಗಳ ಮಾಲೆಯ ನೆನಪಾರ್ಥ</u>* (दीपमाला - चेतन्य दीपकों की माला की यादगार)

ಇಂದು ಬಾಪ್‌ದಾದಾರವರು ಏನನ್ನು ನೋಡುತ್ತಿದ್ದಾರೆ? ತಾವು ದೀಪಗಳ ಮಾಲೆಯನ್ನು ನೋಡುವುದಕ್ಕಾಗಿ ಬಂದಿದ್ದಾರೆ. ದೀಪಾವಳಿಯ ನೆನಪಾರ್ಥದ ದಿನವನ್ನಂತು ಜನರು ಆಚರಿಸುತ್ತಾರೆ ಆದರೆ ಬಾಪ್‌ದಾದಾ ರವರು ಚೈತನ್ಯ ದೀಪಗಳ ಮಾಲೆಯನ್ನು ನೋಡುತ್ತಿದ್ದಾರೆ. ತಾವೆಲ್ಲರೂ ಸಹ ಯಾವಾಗ ದೀಪಾವಳಿಯ ದಿನದಂದು ಜಾಗೃತವಾಗಿದ್ದು, ದೀಪಗಳನ್ನು ನೋಡಿದಾಗ ಇಂತಹ ಖುಷಿಯಾಗುತ್ತದೆಯೇ ನಮ್ಮ ನೆನಪಾರ್ಥವನ್ನೇ ಆಚರಿಸುತ್ತಿದ್ದಾರೆ? ಹೇಗೆ ಬೆಳಗಿರುವ ಜ್ಯೋತಿಯು ಪ್ರಿಯವೆನಿಸುತ್ತದೆಯೋ ಹಾಗೆಯೇ ತಮ್ಮ ನೆನಪಾರ್ಥವನ್ನು ನೋಡಿ ಸ್ಮೃತಿಬರುವುದರಿಂದ, ತಾವೆಲ್ಲರೂ ಸಹ ವಿಶ್ವದ ತಂದೆ ಹಾಗೂ ಇಡೀವಿಶ್ವದ ಆತ್ಮರಿಗೆ ಪ್ರಿಯರಾಗುತ್ತೀರಿ. ಇಂದು ನೆನಪಾರ್ಥ ರೂಪವನ್ನು ಪ್ರತ್ಯಕ್ಷವಾಗಿ ನೋಡುವುದಕ್ಕಾಗಿ ಬಂದಿದ್ದೇವೆ. ಮಾಲೆಯಲ್ಲಿ ಒಂದು ಮಣಿಯಷ್ಟೇ ಇರುವುದಿಲ್ಲ, ಅನೇಕ ಮಣಿಗಳಿಂದಲೇ ಮಾಲೆಯಾಗುತ್ತದೆ. ಅದರಿಂದೇನಾದರೂ ಒಂದು ದೀಪವು ಬೇರೆಯಾಗಿ ಬೆಳಗುತ್ತಿರುತ್ತದೆಯೆಂದರೆ, ಅದನ್ನು ದೀಪಮಾಲೆಯೆಂದು ಹೇಳುವುದಿಲ್ಲ. ಅದೇರೀತಿಯಲ್ಲಿ ಬೆಳಗುತ್ತಿರುವ ಅನೇಕ ದೀಪಗಳು ಮಾಲೆಯ ರೂಪದಲ್ಲಿ ಕಂಡುಬರುತ್ತದೆ. ಪ್ರತಿಯೊಬ್ಬರೂ ತಮ್ಮನ್ನು ಈ ದೀಪಮಾಲೆಯಲ್ಲಿ ಪೋಣಿಸಲ್ಪಟ್ಟಿರುವ, ಬೆಳಗುತ್ತಿರುವ ದೀಪವೆಂದು ತಿಳಿಯುತ್ತೀರಾ? ಅಥವಾ ತಾವೂ ಸಹ ಬೆಳಗುತ್ತಿರುವ ಅನೇಕ ದೀಪಗಳನ್ನು ನೋಡಿ ಹರ್ಷಿತವಾಗುತ್ತೀರಾ? ದೀಪಾವಳಿಯ ಈ ದಿನದಂದು ತಾವೆಲ್ಲರೂ ದೀಪಾವಳಿ ಆಚರಿಸಿದಿರಾ? ಇಂದು ದೀಪಾವಳಿಯನ್ನು ವಿಶೇಷವಾಗಿ ಆಚರಿಸಿದಿರಾ? ತಾವಂತು ಸದಾಕಾಲ ಬೆಳಗುತ್ತಿರುವ ದೀಪವಾಗಿದ್ದೀರಿ. ಆದರೆ ಯಾವಾಗ ವಿಶೇಷ ನೆನಪಾರ್ಥದ ದಿನವಿರುತ್ತದೆಯೋ ಆಗ ವಿಶೇಷ ಆತ್ಮರು ಏನು ಮಾಡಬೇಕಾಗಿದೆ? ವಿಶೇಷ ಆತ್ಮರಲ್ಲಿ ಯಾರು ವಿಶೇಷರೂಪದಿಂದ ನಿಮಿತ್ತವಾಗಿದ್ದಾರೆಯೋ, ಅವರು ವಿಶೇಷವಾದ ಸೇವೆಯನ್ನೇನು ಮಾಡಬೇಕು? ವಿಶೇಷ ಆತ್ಮರಂತೂ, ಅನ್ಯರಿಗಿಂತ ವಿಶೇಷವಾದ ಕಾರ್ಯವನ್ನು ಮಾಡಬೇಕಲ್ಲವೆ ಏಕೆಂದರೆ ಅನ್ಯ ಆತ್ಮರು ಯಾವ ಕಾರ್ಯವನ್ನು ಮಾಡಲು ಸಾಧ್ಯವಿದೆ ಹಾಗೂ ಮಾಡುತ್ತಿದ್ದಾರೆಯೋ ಅದನ್ನೇ ತಾವೂ ಸಹ ಮಾಡುತ್ತೀರೆಂದರೆ ಅಂತರವೇನಾಯಿತು? ವಿಶೇಷ ಆತ್ಮರು ವಿಶೇಷಕಾರ್ಯವನ್ನು ಮಾಡಬೇಕು. ಬಾಪ್‌ದಾದಾರವರು ವಿಶೇಷದಿನಗಳಲ್ಲಿ ವಿಶೇಷರೂಪದಿಂದ ಮಕ್ಕಳ ಹಾಗೂ ಭಕ್ತರ ಸೇವೆಯನ್ನು ಮೂರೂರೂಪಗಳಿಂದ ಮಾಡುತ್ತಾರೆ. ವಿಶೇಷವಾಗಿ ವಿಶೇಷ ಅತ್ಮರು ತಮ್ಮ ನೆನಪಾರ್ಥ ದಿನದಂದು ಸಾಕ್ಷಾತ್ಕಾರ ಮೂರ್ತಿಯಾಗಿದ್ದು, ಸಾಕ್ಷಾತ್ ಬಾಪ್‌ದಾದಾರವರ ಸಮಾನರಾಗಿ, ಆತ್ಮರ ಬಗ್ಗೆ ತಮ್ಮ ಕಲ್ಯಾಣದ ಭಾವನೆಯಿಂದ, ತಮ್ಮ ಆತ್ಮಿಕ ಸ್ನೇಹಸ್ವರೂಪದಿಂದ, ತಮ್ಮ ಸೂಕ್ಷ್ಮ ಶಕ್ತಿಗಳ ಮೂಲಕ ಶಕ್ತಿಯನ್ನು ತುಂಬಬೇಕಾಗಿದೆ. ಹೇಗೆ ಬಾಪ್‌ದಾದಾರವರು ಅವ್ಯಕ್ತರೂಪದಲ್ಲಿಯೂ ನಾಲ್ಕೂಕಡೆಯಲ್ಲಿರುವ ಮಕ್ಕಳ ಸೇವೆಯನ್ನು ಮಾಡುತ್ತಾರೆಯೋ, ಆ ಮಕ್ಕಳು ತಿಳಿಯುತ್ತಾರೆ- ಬಾಪ್‌ದಾದಾರವರು ನನ್ನೊಂದಿಗೆ ವಾರ್ತಲಾಪ ಮಾಡಿದರು, ನನ್ನ ನೆನಪಿನ ಪ್ರತ್ಯುತ್ತರವನ್ನು ಕೊಟ್ಟರು ಅಥವಾ ನಾನು ನನ್ನ ನೆನಪಿನ ಪ್ರತ್ಯಕ್ಷಫಲದ ಅನುಭೂತಿ ಮಾಡಿದೆನು ಅಥವಾ ಭಕ್ತರೂ ಸಹ ಅನುಭವ ಮಾಡುವರು. ಭಗವಂತನು ನಮ್ಮ ಪ್ರೀತಿ ಅಥವಾ ಭಾವನೆಯ ಫಲವನ್ನು ಪೂರ್ಣಗೊಳಿಸಿದರು. ಈ ಅನುಭವವು ಪ್ರತ್ಯಕ್ಷವಾಗಿ ಆಗುತ್ತಿರುತ್ತದೆ.

ಇಂತಹ ವಿಶೇಷ ಆತ್ಮರಿಗೆ ತಮ್ಮ ಅವ್ಯಕ್ತಸ್ಥಿತಿಯಲ್ಲಿದ್ದು, ಒಂದು ಸ್ಥಾನದಲ್ಲಿದ್ದರೂ ನಾಲ್ಕೂಕಡೆಯಲ್ಲಿಯೂ ತಮ್ಮ ಆತ್ಮಿಕ ಲೈಟ್ ಮತ್ತು ಮೈಟ್‌ನ ಸ್ಥಿತಿಯ ಮೂಲಕ ಲೈಟ್‌ಹೌಸ್ ಹಾಗೂ ಮೈಟ್‌ಹೌಸ್ ಆಗಿರುತ್ತಾ, ಅಲೌಕಿಕ ಆತ್ಮಿಕ ಸೇವಾಭಾವನೆ ಹಾಗೂ ಆತ್ಮಿಕವೃತ್ತಿಯ ಮೂಲಕ ಸೇವೆ ಮಡಬೇಕಾಗಿದೆ. ಇದಕ್ಕೆ ಬೇಹದ್ದಿನ ಸೇವೆ ಎಂದು ಹೇಳಲಾಗುವುದು. ಅದರಿಂದ ಇಂತಹ ಅನುಭವವಾಗಬೇಕು- ಇಂದು ನಾನು ವಿಶೇಷ ಆತ್ಮನನ್ನು ನನ್ನ ನೆನಪಾರ್ಥದ ದಿನದಂತು ಪ್ರಜೆ ಅಥವಾ ಭಕ್ತರು ನೆನಪು ಮಾಡುತ್ತಿದ್ದಾರೆ. ಅಲ್ಪಕಾಲದ ರಿದ್ಧಿ-ಸಿದ್ಧಿ ಮಾಡುವವರು, ಒಂದೇ ಸ್ಥಾನದಲ್ಲಿದ್ದರೂ ತಮ್ಮ ರೂಪದ ಪ್ರತ್ಯಕ್ಷ ಸಾಕ್ಷಾತ್ಕಾರವನ್ನು ತನ್ನ

ಭಕ್ತರಿಗೆ ಮಾಡಿಸಬಹುದು. ಅಂದಾಗ ತಾವು ವಿಶೇಷ ಆತ್ಮರು ಲೈಟ್ ಮತ್ತು ಮೈಟ್‌ನ ಸೇವೆಯ ಮೂಲಕ ಭಕ್ತರಿಗೆ ಅಥವಾ ಪ್ರಜೆಗಳಿಗೆ ಅನುಭವ ಮಾಡಿಸಲು ಸಾಧ್ಯವಿಲ್ಲವೇ? ಯಾವಾಗ ಇಂತಹ ವಿಶೇಷ ನೆನಪಾರ್ಥದ ದಿನವು ಬರುತ್ತದೆಯೋ, ಅಂತಹ ದಿನದಂದು ತಾವು ವಿಶೇಷ ಆತ್ಮರಿಗೆ ವಿಶೇಷ ಸೇವೆಯ ಅನುಭವವಾಗಬೇಕು. ಇಂತಹ ಸೇವೆಯನ್ನು ಮಾಡಿದ್ದೀರಾ? ಇದು ಸೇವೆಯಾಯಿತು. ಒಳ್ಳೆಯದು. ದೀಪಾವಳಿಯ ದಿನದಂದು ತಮ್ಮಪ್ರತಿ ವಿಶೇಷ ಗಮನವಿದ್ದಿತೆ? ಇಂದಿನ ದಿನದಂದು ಸದಾಕಾಲಕ್ಕಾಗಿ ತಮ್ಮ ಆತ್ಮದ ಸಂಸ್ಕಾರಗಳಲ್ಲಿ ಪರಿವರ್ತನೆ ತರುವಂತಹ ವಿಶೇಷ ಗಮನವನ್ನು ಕೊಟ್ಟಿದ್ದೀರಾ? ಯಾವಾಗ ನೆನಪಾರ್ಥದ ರೂಪದಲ್ಲಿ ಇಂದಿನ ದಿನದಂದು ಹಳೆಯ ಖಾತೆಗಳನ್ನು ಸಮಾಪ್ತಿಗೊಳಿಸುವ ರೂಪದಲ್ಲಿ ನಡೆಯುತ್ತಾ ಬರುತ್ತಿದೆ. ಅದನ್ನು ತಾವು ಅವಶ್ಯವಾಗಿ ಪ್ರತ್ಯಕ್ಷರೂಪದಲ್ಲಿ ಮಾಡಿದ್ದೀರಿ ಆದ್ದರಿಂದ ನೆನಪಾರ್ಥವು ನಡೆಯುತ್ತಾ ಬರುತ್ತಿದೆ. ಅಂದಾಗ ಇಂದು ತಮ್ಮ ಹಳೆಯ ಸಂಸ್ಕಾರಗಳಲ್ಲಿ ಅಲ್ಪಸ್ವಲ್ಪ ಉಳಿದುಕೊಂಡಿರುವ ಖಾತೆಯನ್ನು ಸಮಾಪ್ತಿ ಮಾಡಿದಿರಾ? ಸಮಾಪ್ತಿ ಮಾಡುವಮೊದಲು ತಮ್ಮ ಖಾತೆಯನ್ನು ಪರಿಶೀಲನೆ ಮಾಡಲಾಗುತ್ತದೆ. ಫಲಿತಾಂಶವನ್ನು ತೆಗೆಯಲಾಗುತ್ತದೆ. ಅದೇರೀತಿ ತಾವೆಲ್ಲರೂ ಸಹ ತಮ್ಮ ಲೆಕ್ಕಾಚಾರವನ್ನು ಪರಿಶೀಲನೆ ಮಾಡಿದಿರಾ? ಅದರಲ್ಲಿ ಪರಿಶೀಲನೆಯನ್ನೇನು ಮಾಡಿದಿರಿ? ಇಂದಿನ ವರೆಗೂ ಏನೆಲ್ಲಾ ಪುರುಷಾರ್ಥವು ನಡೆಯಿತೋ, ಈಗಿನವರೆಗೂ ಅದರ ಫಲಿತಾಂಶದಲ್ಲಿ ಯಾವ ಮಾತುಗಳಲ್ಲಿ ಹಾಗು ಶೇಕಡ ಎಷ್ಟು ಸಫಲತಾ ಮೂರ್ತಿಯಾಗಿದ್ದೀರಿ? ಮೊದಲು ತಮ್ಮ ಮನಸ್ಸಾ ಸಂಕಲ್ಪಗಳ ಲೆಕ್ಕವನ್ನು ಪರಿಶೀಲನೆ ಮಾಡಿರಿ- ಈಗಿನವರೆಗೂ ನಾನು ಎಲ್ಲಿಯವರೆಗೆ ಸಂಪೂರ್ಣ ಶ್ರೇಷ್ಠ ಸಂಕಲ್ಪಗಳ ಪುರುಷಾರ್ಥದಲ್ಲಿ ಸಫಲತೆಯು ಬಂದಿದೆ? ವ್ಯರ್ಥಸಂಕಲ್ಪಗಳ ಅಥವಾ ವಿಕಲ್ಪಗಳಪ್ರತಿ ಎಲ್ಲಿಯವರೆಗೆ ವಿಜಯಿ ಯಾಗಿರುವೆನು? ಮತ್ತು ವಾಣಿಯ ಮೂಲಕ ತಂದೆಯ ಪರಿಚಯವನ್ನು ಆತ್ಮರಿಗೆ ಎಲ್ಲಿಯವರೆಗೆ ಕೊಡಲು ಸಾಧ್ಯವಾಯಿತು. ಅದರಲ್ಲಿ ಎಷ್ಟು ಆತ್ಮರು ತಂದೆಯ ಸ್ನೇಹಿ ಅಥವಾ ಸಹಯೋಗಿಯನ್ನಾಗಿ ಮಾಡಲು ಸಾಧ್ಯವಾಯಿತು? ವಾಚಾದಲ್ಲಿ ಎಲ್ಲಿಯವರೆಗೆ ಆತ್ಮೀಯತೆ, ಅಲೌಕಿಕ ಅಥವಾ ಆಕರ್ಷಣೆ ಬಂದಿತು? ಅದೇರೀತಿ ಕರ್ಮಣಾದ ಮೂಲಕ ಸದಾ ಭಿನ್ನ ಹಾಗೂ ಪ್ರಿಯ, ಅಲೌಕಿಕ, ಅಸಾಧಾರಣ ಕರ್ಮವು ಎಲ್ಲಿಯವರೆಗೆ ಮಾಡಲು ಸಾಧ್ಯವಾಗಿದೆ? ಕರ್ಮಗಳಲ್ಲಿ ಎಲ್ಲಿಯವರೆಗೆ ಕರ್ಮಯೋಗಿ, ಯೋಗಯುಕ್ತ, ಯುಕ್ತಿಯುಕ್ತ, ಸ್ನೇಹಯುಕ್ತ ರೂಪವನ್ನು ಧಾರಣೆ ಮಾಡಿರುವೆನು? ಎಲ್ಲಿಯವರೆಗೆ ತಮ್ಮ ಸಂಸ್ಕಾರಗಳು ಮತ್ತು ಸ್ವರೂಪಗಳಲ್ಲಿ ಅರ್ಥಾತ್ ಚಹರೆಯಲ್ಲಿ ತಂದೆಯ ಸಮಾನ ಆಕರ್ಷಣಾರೂಪ, ಸ್ನೇಹಿರೂಪ, ಸಹಯೋಗಿ ರೂಪದವನಾದೆನು? ಹೀಗೆ ತಮ್ಮ ಲೆಕ್ಕಾಚಾರವನ್ನು ಪರಿಶೀಲನೆ ಮಾಡುವುದರಿಂದ ಈಗಿನವರೆಗೂ ಯಾವ ಕೊರತೆ ಅಥವ ಬಲಹೀನತೆಗಳಿವೆಯೋ, ಅದನ್ನು ಸಮಾಪ್ತಿಗೊಳಿಸಿ ಹೊಸಖಾತೆಯನ್ನು ಪ್ರಾರಂಭಿಸಬಹುದೇ? ಈ ರೀತಿಯಲ್ಲಿ ತಮ್ಮ ಲೆಕ್ಕಾಚಾರವನ್ನು ಪರಿಶೀಲನೆ ಮಾಡಿರಿ.

ಇದಕ್ಕೇ ದೀಪಾವಳಿ ಹಬ್ಬವನ್ನಾಚರಿಸುವುದು ಎಂದು ಅಥವಾ ತಮ್ಮನ್ನು ಸಂಪೂರ್ಣರನ್ನಾಗಿ ಮಾಡಿಕೊಳ್ಳುವ ಧೃಡಸಂಕಲ್ಪವನ್ನು ಮಾಡುವುದೇ ಆಚರಿಸುವುದೆಂದು ಹೇಳಲಾಗುತ್ತದೆ. ಹಾಗಾದರೆ ಈ ರೀತಿಯಲ್ಲಿ ದೀಪಾವಳಿ ಆಚರಿಸಿದಿರಾ ಅಥವಾ ಕೇವಲ ಮಿಲನ ಮಾಡಿದಿರಾ? ಮಿಲನ ಮಾಡುವ ನೆನಪಾರ್ಥವು ಮಾಲೆಯ ರೂಪದಲ್ಲಿದೆ ಆದರೆ ಧೃಡಸಂಕಲ್ಪಗಳ ನೆನಪಾರ್ಥವು ದೀಪದ ಜ್ಯೋತಿರೂಪದ್ದಾಗಿದೆ. ಹಾಗಾದರೆ ಎರಡೂ ರೀತಿಯಲ್ಲಿ ಆಚರಿಸಿದಿರಾ? ಹೊಸವಸ್ತ್ರವನ್ನು ಧರಿಸಿದಿರೆ? ಆತ್ಮನಿಗೆ ಯಾವ ಆಧಾರದಿಂದ ಹೊಸವಸ್ತ್ರವು ಸಿಗುತ್ತದೆ? ಸಂಸ್ಕಾರಗಳ ಆಧಾರದಿಂದ ಸಿಗುತ್ತದೆಯಲ್ಲವೆ. ಆತ್ಮದ ಸಂಸ್ಕಾರವು ಹೇಗಿದೆಯೋ, ಅದರನುಸಾರವೇ ವಸ್ತ್ರವು ತಯಾರಾಗುತ್ತದೆ. ಅಂದಮೇಲೆ ಯಾವ ಹೊಸವಸ್ತ್ರ ಅಥವ ಹೊಸಶರೀರವನ್ನು ಧರಿಸುವಿರಿ? ಯಾವರೀತಿ ಆತ್ಮದಲ್ಲಿ ಹೊಸಯುಗದ ಸಂಸ್ಕಾರ ಅಥವಾ ಹೊಸಯುಗದ ಸ್ಥಾಪಕ ತಂದೆಯು ಸಂಪೂರ್ಣ ಸಂಸ್ಕಾರಗಳನ್ನು ಧಾರಣೆ ಮಾಡಿದರು- ಹೊಸವಸ್ತ್ರವನ್ನು ತೊಡುವುದೆಂದರೆ ಇದೇ ಆಗಿದೆ. ಶರೀರದಲ್ಲಿ ಹೊಸವಸ್ತ್ರವನ್ನು ಭಲೆ ಎಷ್ಟಾದರೂ ತೊಡಬಹುದು ಆದರೆ ಇಂದಿನ ಹಳೆಯ ಪ್ರಪಂಚದ ಹೊಸವಸ್ತುವೂ ಸಹ ಹೊಸಪ್ರಪಂಚದ ಮುಂದೆ ಹಳೆಯದೇ ಆಗಿದೆ. ಏಕೆಂದರೆ ಅತಿಕನಿಷ್ಟ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಂಡಿದೆ. ಆದ್ದರಿಂದ ಹೊಸವಸ್ತ್ರವನ್ನು ಧರಿಸುತ್ತೀರೆಂದರೂ ಹೊಸವಸ್ತ್ರವೆಂದು ಹೇಳುವುದಿಲ್ಲ. ಸತೋಪ್ರಧಾನ ಪ್ರಪಂಚದಲ್ಲಿ ಎಲ್ಲವೂ ಹೊಸದಾಗಿರುತ್ತದೆ. ತಮೋಪ್ರಧಾನ ಪ್ರಪಂಚದ ವಸ್ತುಗಳೆಲ್ಲವೂ

ಹಳೆಯದಾಗಿದೆ. ನಿಸ್ಸಾರವಾಗಿದೆ. ಅಂದಾಗ ಅದನ್ನು ಹೊಸದೆಂದು ಹೇಳುವರೇ? ಹೊಸವಸ್ತ್ರ ಅರ್ಥಾತ್ ತಮ್ಮ ಆತ್ಮದ ಹೊಸಸಂಸ್ಕಾರ, ಶ್ರೇಷ್ಠ ಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳುವುದಾಗಿದೆ. ಮತ್ತೇನು ಮಾಡುವಿರಿ? ಯಾವಾಗ ಹೊಸಸಂಸ್ಕಾರವನ್ನು ಧಾರಣೆ ಮಾಡಿ ಕೊಂಡಿದ್ದೀರಿ, ಅಂದಾಗ ಲೆಕ್ಕವನ್ನಿಡುವ ಅಭ್ಯಾಸವಾಗುತ್ತದೆ ಅಲ್ಲವೆ. ಈ ರೀತಿ ಲೆಕ್ಕವನ್ನಿಡುವುದೇ ಸ್ವಚ್ಛತೆಯಾಗಿದೆ. ಹೇಗೆ ದೀಪಾವಳಿಯಲ್ಲಿ ಸ್ವಚ್ಛ ಮಾಡುವಾಗ ಏನೆಲ್ಲಾ ಕಸ ಅಥವ ಕೀಟಾಣುಗಳಿರುತ್ತವೆ, ಅವು ಸ್ವತಹವಾಗಿಯೇ ಸಮಾಪ್ತಿಯಾಗಿಬಿಡುತ್ತದೆ. ಪರಸ್ಪರದಲ್ಲಿ ತಮ್ಮ ಮಧುರ ಮಾತುಗಳಿಂದ ಎಂತಹ ಲೇವಾದೇವಿ ಮಾಡುವಿರಿ? ದೀಪಾವಳಿಯಂದು ಒಬ್ಬರಿನ್ನೊಬ್ಬರಿಂದ ಗಿಫ್ಟ್ (ಸ್ವೀಟ್ಸ್, ಗಿಫ್ಟ್..) ತೆಗೆದುಕೊಳ್ಳುವರಲ್ಲವೆ. ತಾವುಗಳು ಒಬ್ಬರಿನ್ನೊಬ್ಬರಿಗೆ ಎಂತಹ ಖರ್ಚು ಮಾಡುವಿರಿ (ಗಿಫ್ಟ್ ಕೊಡುವಿರಿ). ತಮ್ಮಬಳಿ ಅಂತಹ ಯಾವ ವಸ್ತುವಿದೆ, ಅದನ್ನು ಒಬ್ಬರಿನ್ನೊಬ್ಬರಿಗೆ ಕೊಡುವಿರಿ? (ಸ್ನೇಹದ ಗಿಫ್ಟ್) ಒಬ್ಬರಿನ್ನೊಬ್ಬರೊಂದಿಗೆ ಸದಾಕಾಲಕ್ಕಾಗಿ ಸ್ನೇಹಿಗಳಾಗಿರುತ್ತೀರಿ. ಇಂದು ಎಂತಹ ಸ್ನೇಹಿಯಾಗುವಿರಿ? ಸ್ನೇಹಿಗಳಂತು ಆಗಿರುವಿರಿ ಮತ್ತು ಇದೇ ಸ್ನೇಹದ ಲಕ್ಷಣದಿಂದ ಪರಸ್ಪರದ ಸಮೀಪತೆಯ ಚಿಹ್ನೆಯಾಗಿ ದೀಪಾವಳಿ ಎಂದು ಹೇಳಲಾಗುತ್ತದೆ. ವಿಶೇಷದಿನಗಳಲ್ಲಿ ವಿಶೇಷವಾಗಿ ಯಾವ ಗಿಫ್ಟನ್ನು ಕೊಡಬೇಕಾಗಿದೆ? ಯಾರಿಗೆ ತನ್ನ ಪುರುಷಾರ್ಥದ ಮೂಲಕ ಈಗಿನವರೆಗೂ ಸಹಜ ಸಫಲತೆಯ ಪ್ರಾಪ್ತಿಯಾಗಿದೆ ಅಥವಾ ಅನುಭವವಾಗಿದೆಯೋ, ತಮ್ಮ ಅಂತಹ ಆನುಭವದ ಜ್ಞಾನರತ್ನಗಳಿಂದ ಪ್ರತ್ಯಕ್ಷಅನುಭವಿಯಾಗಿ ಅನ್ಯರನ್ನೂ ಅನುಭವಿಯನ್ನಾಗಿ ಮಾಡಬಹುದು. ಇಂತಹ ಅನುಭವದ ರತ್ನಗಳನ್ನು ಪರಸ್ಪರದಲ್ಲಿ ಗಿಫ್ಟ್‌ನ ರೂಪದಲ್ಲಿ ಕೊಡಬೇಕಾಗಿದೆ. ತಿಳಿಯಿತೆ? ತಂದೆಯ ಖಜಾನೆಯನ್ನು ತಮ್ಮ ಅನುಭವದ ಮೂಲಕ ಯಾರು ತಮ್ಮವರನ್ನಾಗಿ ಮಾಡಿಕೊಂಡಿದ್ದೀರಿ, ತಮ್ಮಲ್ಲಿ ಸಮಾವೇಶ ಮಾಡಿಕೊಂಡಿರುವ ಜ್ಞಾನರತ್ನಗಳನ್ನು ಪರಸ್ಪರದಲ್ಲಿ ಕೊಡಬೇಕಾಗಿದೆ. ಅದರಿಂದ ಆ ಆತ್ಮವೂ ಸಹ ಸಹಜ ಅನುಭವಿಯಾಗಲಿ, ಇದಾಗಿದೆ ಗಿಫ್ಟ್, ಹಾಗಾದರೆ ಪರಸ್ಪರದಲ್ಲಿ ಒಬ್ಬರಿನ್ನೊಬ್ಬರು ಇಂತಹ ಗಿಫ್ಟ್ ಕೊಡಿ. ಅದು ಸದಾಕಾಲಕ್ಕಾಗಿ ನೆನಪಾರ್ಥವಾಗಿಬಿಡಲಿ. ಯಾರಿಗೇ ಇಂತಹ ರತ್ನಗಳನ್ನು ಕೊಡುತ್ತೀರೆಂದರೆ, ಆ ಆತ್ಮನಿಗೂ ತಮಗೆ ತಂದೆಯು ಕೊಟ್ಟಿರುವ ರತ್ನಗಳ ನೆನಪು ಅವಶ್ಯವಾಗಿರುತ್ತದೆ. ಅಂದಾಗ ಯಾರಿಗೇ ಆಗಲಿ ಸದಾಕಾಲಕ್ಕಾಗಿ ಸಂಪನ್ನರನ್ನಾಗಿ ಮಾಡುವಂತಹ ಗಿಫ್ಟ್ ಕೊಡಬೇಕಾಗಿದೆ. ಇಂತಹ ದೀಪಾವಳಿಯನ್ನಾಚರಿಸಿ ಮತ್ತು ಇದೇರೀತಿ ಶ್ರೇಷ್ಠಾತ್ಮರಾಗಿದ್ದು, ಅನ್ಯಆತ್ಮರ ಶ್ರೇಷ್ಠಸೇವೆಯನ್ನು ಮಾಡಿರಿ.

ವರ್ತಮಾನದಲ್ಲಿ ಸರ್ವ ಆತ್ಮರು ಹಣದ ಬಾಯಾರಿಕೆಯಲ್ಲಿದ್ದಾರೆ. ಇಂತಹ ಬಾಯಾರಿರುವ ಆತ್ಮರಿಗೆ, ಅಂತಹ ಆತ್ಮಿಕ ಧನವನ್ನು ಕೊಡಿ, ಯಾವುದರಿಂದ ಆ ಆತ್ಮನೆಂದಿಗೂ ಬೇಡುವಂತಹ ಅವಶ್ಯಕತೆಯಿರಬಾರದು. ಧನವನ್ನು ಯಾರು ಬೇಡುವರು? ಬಿಕಾರಿಗಳು, ಇಂದಿನ ದಿನ ಆತ್ಮವು ಬಿಕಾರಿಯಾಗುತ್ತದೆ. ರಾಯಲ್ ಬಿಕಾರಿಯೆಂದೇ ಹೇಳಿ, ಯಾರೆಷ್ಟೇ ಕೋಟ್ಯಾಧಿಪತಿ ಆಗಿರಬಹುದು ಆದರೆ ಇಂದಿನ ದಿನದಲ್ಲಿ ಬಿಕಾರಿಯಾಗಿದ್ದಾರೆ. ಇಂತಹ ಬಿಕಾರಿಆತ್ಮರನ್ನು ಬಿಕಾರಿತನದಿಂದ ಮುಕ್ತ ಗೊಳಿಸುವುದೇ ಬೇಹದ್ದಿನ ಸೇವೆಯಾಗಿದೆ. ತಾವು ದಾತನ ಮಕ್ಕಳಾಗಿದ್ದೀರಲ್ಲವೆ ಅಂದಮೇಲೆ ಬಿಕಾರಿಗಳನ್ನು ಸಂಪನ್ನಗೊಳಿಸಿರಿ. ದಾತನ ಮಕ್ಕಳು, ವರದಾತನ ಮಕ್ಕಳು, ತಮ್ಮ ವರದಾನದ ಶಕ್ತಿಯಿಂದ, ಜ್ಞಾನದಾನದ ಶಕ್ತಿಯಿಂದ ಬಿಕಾರಿಗಳನ್ನು ಸಂಪನ್ನಗೊಳಿಸಿರಿ. ಇಂದಿನ ದಿನದಲ್ಲಿ ಈ ಬಿಕಾರಿ ಆತ್ಮರಪ್ರತಿ ವಿದಾತಾ ಮತ್ತು ವರದಾತನ ಮಕ್ಕಳಿಗೆ ದಯೆಬರಬೇಕು. ಈ ರೀತಿ ಯಾವ ಆತ್ಮರಿಗೆ ದಯೆ ಬರುತ್ತದೆಯೋ, ಅವರಿಗೂ ಮಾಯೆ ಮತ್ತು ವಿಶ್ವದಲ್ಲಿನ ಆತ್ಮರು ನಮಸ್ಕಾರ ಮಾಡುವರು. ಹೀಗೆ ಜ್ಯೋತಿ ಬೆಳಗಿರುವ ಆತ್ಮರ ನೆನಪಾರ್ಥವು ಈಗಲೂ ಕಾಯಂ ಆಗಿದೆ. ನಂದಿ ಹೋಗಿರುವ ದೀಪಕ್ಕೆ ನಮಸ್ಕಾರ ಮಾಡುವುದಿಲ್ಲ. ಆದ್ದರಿಂದ ಸದಾ ಜಾಗೃತವಾಗಿರುವ ಜ್ಯೋತಿಯಾಗಿರಿ. ಇಂತಹ ಆತ್ಮರಿಗೆ ಬಾಪ್‌ದಾದಾರವರೂ ಸಹ ನಮಸ್ಕಾರ ಮಾಡುವರು. ಒಳ್ಳೆಯದು-

ಅವ್ಯಕ್ತ ಮುರಳಿ 18-10-1971.

***ದೀಪಾವಳಿ- ಚೈತನ್ಯ ದೀಪಗಳ ಮಾಲೆಯ ನೆನಪಾರ್ಥ.***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ದೀಪ ಮಾಲೆಯ ಮಧ್ಯದಲ್ಲಿ ಪೋಣಿಸಲ್ಪಟ್ಟ, ಸದಾ ಜಾಗೃತವಾಗಿರುವ ಚೈತನ್ಯ ದೀಪ.

2. ನಾನು ವಿಶೇಷ ರೂಪದಿಂದ ನಿಮಿತ್ತವಾಗಿರುವ ವಿಶೇಷ ಕಾರ್ಯವನ್ನು ಮಾಡುವ ವಿಶೇಷ ಆತ್ಮ.

3. ವಿಶೇಷ ಆತ್ಮನಾದ ನಾನು ನನ್ನ ಸ್ಮೃತಿಚಿಹ್ನೆಯ ದಿನದಂದು ಸಾಕ್ಷಾತ್ಕಾರ ಮೂರ್ತಿಯಾಗಿ ಸಾಕ್ಷಾತ್ ಬಾಪ್ ದಾದಾ ಸಮಾನವಾಗಿ, ಕಲ್ಯಾಣ ಭಾವನೆಯಿಂದ, ಆತ್ಮಿಕ ಸ್ನೇಹಸ್ವರೂಪದಿಂದ, ಸೂಕ್ಷ್ಮ ಶಕ್ತಿಗಳಿಂದ ವಿಶ್ವದಲ್ಲಿರುವ ಆತ್ಮರಲ್ಲಿ ಶಕ್ತಿಯನ್ನು ತುಂಬಿದ್ದೇನೆ.

4. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ಲೈಟ್ ಹೌಸ್ ಮತ್ತು ಮೈಟ್ ಹೌಸ್ ಆಗಿ ಒಂದೇ ಸ್ಥಾನದಲ್ಲಿರುತ್ತಲೂ, ವೃತ್ತಿಯಿಂದ ನಾಲ್ಕೂ ಕಡೆ ಆತ್ಮಿಕ ಸೇವೆಯನ್ನು, ಭಾವನೆಯನ್ನು ಅನುಭವ ಮಾಡಿಸುವ ಬೇಹದ್ ಸೇವಾಧಾರಿ.

5. ನಾನು ನನ್ನ ಹಳೆಯ ಸಂಸ್ಕಾರಗಳ ಖಾತೆಯನ್ನು ಮನಸಾ, ವಾಚಾ, ಕರ್ಮಣಾ ಪರಿಶೀಲಿಸಿಕೊಂಡು ಕೊರತೆ ಮತ್ತು ಬಲಹೀನತೆಗಳನ್ನು ಸಮಾಪ್ತಿ ಮಾಡಿಕೊಂಡು ಹೊಸ ಖಾತೆಯನ್ನು ಪ್ರಾರಂಭಿಸಿ ದೀಪಾವಳಿಯನ್ನು ಆಚರಿಸಿಕೊಂಡಿದ್ದೇನೆ.

6. ನಾನು ಹೊಸ ಯುಗದ ಸಂಸ್ಕಾರಗಳನ್ನು, ನವಯುಗ ಸ್ಥಾಪಕನಾದ ತಂದೆಯ ಸಮಾನವಾದ ಸಂಪೂರ್ಣ ಸಂಸ್ಕಾರಗಳನ್ನು ಧಾರಣೆ ಮಾಡಿದ್ದೇನೆ.

7. ನಾನು ಹೊಸ ಸಂಸ್ಕಾರಗಳನ್ನು ಧಾರಣೆ ಮಾಡಿ ಲೆಕ್ಕಾಚಾರವನ್ನು ಸರಿಪಡಿಸಿಕೊಂಡಿರುವ ಸ್ವಚ್ಛತೆ ಮತ್ತು ಸತ್ಯತೆಯ ಸ್ವರೂಪ.

8. ನಾನು ತಂದೆ ಕೊಟ್ಟಿರುವ ಜ್ಞಾನ ರತ್ನಗಳೊಂದಿಗೆ ಅನುಭವಿಯಾಗಿ ಇತರರನ್ನು ಪ್ರತ್ಯಕ್ಷ ಅನುಭವೀ ಮೂರ್ತಿಯಾಗಿ ತಯಾರು ಮಾಡಿದ್ದೇನೆ.

9. ದಾತ ಮತ್ತು ವರದಾತನ ಮಗುವಾದ ನಾನು ವರದಾನ, ಜ್ಞಾನಧನದ ಶಕ್ತಿಯಿಂದ ಭಿಕಾರಿಗಳನ್ನು ಸಂಪನ್ನವಾಗಿ ಮಾಡಿರುವ ಬೇಹದ್ ಸೇವಾಧಾರಿ.